ಎಂದು ವರದಿಯಾಗಿದೆ. ಇದರಿಂದ ಮೈಸೂರು ರಾಜ್ಯದ ಘನತೆಗೆ ಧಕ್ಕೆ ಬಂದಿದೆ. ಇದರ ಬಗ್ಗೆ ನಾನು ಒಂದು ಕಾಲ್ ಅಟೆನ್‌ಷನ್ ನೋಟೀಸನ್ನು ತಮಗೆ ಕಳುಹಿಸಿದ್ದೆ ಆದು ಏನಾಯಿತು ಎಂಬುದು ಗೊತ್ತಾಗಲಿಲ್ಲ.

ಅಧ್ಯಕ್ಷರು.—ಅದು ನನಗೆ ಬಂದಿದೆ. ಅದನ್ನು ನಾನು ನೋಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ —ಆ ಸಚಿವರು ಯಾರು ಎಂಬುದು ಮಾನ್ಯ ಮುಖ್ಯ ಮಂತ್ರಿಗಳಿಗೆ ಗೊತ್ತಿದೆ. ಅವರ ಹೆಸರನ್ನು ಮಾನ್ಯ ಮುಖ್ಯ ಮಂತ್ರಿಗಳು ಈ ಸಭೆಗೆ ಹೇಳಬೇಕು.

ಶ್ರೀ ಬಿ. ಪುಟ್ಟಸ್ವಾಮಯ್ಯ.— ಇಂಥಾ ಅವ್ಯವಹಾರಗಳು ನಡೆದರೆ ಇದರಿಂದ ಮುಖ್ಯ ಮಂತ್ರಿಗಳ ಘನತೆಗೆ ಧಕ್ಕೆ ಬರುತ್ತದೆ. ಮೈಸೂರು ರಾಜ್ಯ ಇಡೀ ವಿಶ್ವದಲ್ಲಿಯೇ ಮಾದರಿಯ ರಾಜ್ಯ ಎಂದು ಹೆಸರು ಪಡೆದಿದೆ. ಹೀಗಿರುವಾಗ ಮೈಸೂರು ರಾಜ್ಯದ ಒಬ್ಬರು ಸಚಿವರು ಇಂಥಾ ಅವ್ಯವಹಾರವನ್ನು ಮಾಡಿದರು ಎಂದರೆ ಇದು ಮೈಸೂರಿಗೆ ಅಪಮಾನವಾಗುತ್ತದೆ. ಇಂಥಾ ಒಬ್ಬ ಮಂತ್ರಿಗಳು ಶ್ರೀಮಾನ್ ದೇವರಾಜ ಅರಸ್ ಅವರ ಮಂತ್ರಿಮಂಡಲದಲ್ಲಿದ್ದಾರೆ. ಆ ಸಚಿವರು ಇಂಥಾ ಒಂದು ಅವ್ಯವಹಾರವನ್ನು, ಅಯೋಗ್ಯ ವ್ಯವಹಾರವನ್ನು ಮಾಡಿರುವುದರಿಂದ ಅವರನ್ನು ಮುಖ್ಯ ಮಂತ್ರಿಗಳು ಕೂಡಲೇ ಮಂತ್ರಿಮಂಡಲದಿಂದ ಸಸ್ಪೆಂಡ್ ಮಾಡಿ, ಅವರ ಬಗ್ಗೆ ತನಿಖೆ ಮಾಡಿಸಬೇಕು. ತನಿಖೆ ಆಗುವವರೆಗೆ ಎಲ್ಲಾ ಮಂತ್ರಿಗಳನ್ನು ಸಸ್ಪೆಂಡ್ ಮಾಡಿ ಮುಖ್ಯ ಮಂತ್ರಿಗಳು ಒಬ್ಬರೇ ಇರಲಿ.

ಅಧ್ಯಕ್ಷರು.—ಅದರಲ್ಲಿ ಏನಿದೆ ಎಂಬುದನ್ನು ನಾನು ನೋಡುತ್ತೇನೆ. ಆಮೇಲೆ ಆ ಬಗ್ಗೆ ಮಾತನಾಡುವುದಕ್ಕೆ ತಮಗೆ ಪರ್ಮಿಷನ್ ಕೊಡುತ್ತೇನೆ. ತಾವು ಈಗ ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಕಾಗೋಡು ತಿಮ್ಮಪ್ಪ.—ಮಹಾರಾಷ್ಟ್ರ ಹೋಂ ಡಿಪಾರ್ಟ್‌ಮೆಂಟಿನಿಂದ ನಮ್ಮ ರಾಜ್ಯದ ಹೋಂ ಡಿಪಾರ್ಟ್‌ಮೆಂಟಿಗೆ ಈ ಬಗ್ಗೆ ಒಂದು ಪತ್ರ ಬಂದಿದೆ ಎಂದು ತಿಳಿದುಬಂದಿದೆ. ಆ ಪತ್ರವನ್ನು ಈ ಸದನದ ಮುಂದೆ ಮಂಡಿಸಬೇಕೆಂದು ತಮ್ಮ ಮೂಲಕ ಸರ್ಕಾರದವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ನಾನೂ ಸಹ ಆ ವಿಷಯವನ್ನು ಪತ್ರಿಕೆಯಲ್ಲಿ ಓದಿದ್ದೇನೆ.

ಶ್ರೀ ಡಿ. ದೇವರಾಜ ಅರಸ್.—ಅದನ್ನೆಲ್ಲಾ ವ್ಯಾಖ್ಯಾನ ಮಾಡುವುದಕ್ಕೆ ಸಮಯವಿದ್ದರೆ, ಅದು ಯಾವ ರೀತಿ ಸಭೆಯ ಮುಂದೆ ಬರಬೇಕೋ ಆ ರೀತಿಯಲ್ಲಿ ಬರಲಿ. ಸರ್ಕಾರಕ್ಕೆ ನೋಟೀಸ್ ಕೊಟ್ಟು ಹೇಳಿದರೆ ಅದರ ಬಗ್ಗೆ ಉತ್ತರ ಹೇಳುವುದಕ್ಕೆ ಅನುಕೂಲವಾಗುತ್ತದೆ. ಅವನ್ನು ಬಿಟ್ಟು ಯಾವುದೋ ಪತ್ರಿಕೆಯಲ್ಲಿ ಏನೋ ಬಂದಿದೆ ಎಂದು ಸರ್ಕಾರಕ್ಕೆ ನೋಟೀಸ್ ಕೊಡದೆ ಪ್ರಸ್ತಾಪ ಮಾಡುವುದು ಸರಿಯಲ್ಲ. ಒಂದು ಪಕ್ಷ ಪತ್ರಿಕೆಗಳಲ್ಲಿ ಬಂದಿರುವುದು ನಿಜವಾಗಿದ್ದರೆ ಅದನ್ನು ಸಾಕ್ಷಿ ಸಮೇತವಾಗಿ ಸಭೆಯ ಮುಂದೆ ತೆಗೆದುಕೊಂಡು ಬನ್ನಿ. ಅದನ್ನು ಬಿಟ್ಟು ಪತ್ರಿಕೆಗಳು ಬಂದಿರುವ ಎಲ್ಲ ವಿಷಯಗಳ ಬಗ್ಗೆಯೂ ಸರ್ಕಾರಕ್ಕೆ ನೋಟೀಸ್ ಕೊಡದೆ ಮಾತನಾಡುವುದು ಯಾವ ಧರ್ಮ, ಯಾವ ನ್ಯಾಯ ? ಅದಕ್ಕೂ ಒಂದು ಕಾನೂನು, ನಡೆವಳಿಕೆ ಬೇಡವೇ.

Taking up pending notices in the House.

ಶ್ರೀ ಕೋಣಂದೂರು ಲಿಂಗಪ್ಪ.—ಮಾನ್ಯ ಅಧ್ಯಕ್ಷಣಿಯವರೇ, ನಾನು ನಾಲ್ಕಾರು ದಿವಸಗಳ ಮುಂಚೆ ತಮಗೆ ಒಂದು ಅಲ್ಪ ಕಾಲಾವಧಿಯ ಪ್ರಶ್ನೆಯನ್ನು ಕಳಿಸಿದ್ದೆ. ಅದಕ್ಕೆ ಸರ್ಕಾರದಿಂದ ಇನ್ನೂ ಉತ್ತರ ಬರಲಿಲ್ಲ ?

ಅಧ್ಯಕ್ಷರು.—ಅದನ್ನು ಸರ್ಕಾರಕ್ಕೆ ಕಳುಹಿಸಿದ್ದೇನೆ. ಉತ್ತರ ಬರುತ್ತದೆ.

ಶ್ರೀ ಕೋಣಂದೂರು ಲಿಂಗಪ್ಪ.—ಗರ್ಭಗುಡಿಯಿಂದ ಗಣಪನಂತೆ ಈ ಸರ್ಕಾರದಿಂದ ಉತ್ತರ ಬರಲು ಬಹಳ ಕಾಲ ಬೇಕಾಗುತ್ತದೆ. ಸರ್ಕಾರದಿಂದ ಜಾಗ್ರತೆ ಉತ್ತರ ಬರುವಂತೆ ತಾವು ನೋಡಿಕೊಳ್ಳಬೇಕು.

ಅಧ್ಯಕ್ಷರು.—ಸರ್ಕಾರದಿಂದ ಉತ್ತರ ಬಂದಕೂಡಲೇ ತೆಗೆದುಕೊಳ್ಳುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ.—ತ್ಯಂಗೇರಿ ತಾಲ್ಲೂಕಿನ ಕೊಪ್ಪದಲ್ಲಿ ನಮ್ಮ ಪಕ್ಷದ ತರುಣ ಮುಖಂಡರು ಮತ್ತು ಕಾರ್ಯಕರ್ತರಾದಂಥ ಶ್ರೀಮಾನ್ ಬಿ. ಜಿ. ಚಂದ್ರಶೇಖರಯ್ಯನವರ ಮೇಲೆ ಅಲ್ಲಿಯ ಸಬ್-ಇನ್ಸ್‌ಪೆಕ್ಟರ್ ಅವರು ಹಲ್ಲೆ ಮಾಡಿದ್ದಾರೆ. ನಮ್ಮ ಪಕ್ಷದ ಕಾರ್ಯಕರ್ತರಿಗೆ ರಕ್ಷಣೆ ಇಲ್ಲವಾಗಿದೆ.

ಅಧ್ಯಕ್ಷರು.—ಎಲ್ಲವನ್ನೂ ಈಗಲೇ ಹೇಳುವುದಕ್ಕೆ ಹೋಗಬೇಡಿ.

ಶ್ರೀ ಕೋಣಂದೂರು ಲಿಂಗಪ್ಪ.—ಸರ್ಕಾರದವರು ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೇ, ನಾನು ಹಲವಾರು ವಿಷಯಗಳ ಬಗ್ಗೆ ನೋಟೀಸ್ ಕೊಟ್ಟು ಒಂದು ಪಾರಪಾಯಿತು. ಅವುಗಳಿಗೆ ಉತ್ತರ ಕೊಡಲು ಸರ್ಕಾರಕ್ಕೆ ಸಮಯಬೇಕು ನಿಜ. ಸಂಬಂಧಪಟ್ಟ ವರ್ತಮಾನಗಳನ್ನು ತರಿಸಿಕೊಂಡು ಚರ್ಚೆ ಮಾಡಬೇಕಾಗುತ್ತದೆ. ಮತ್ತು ಸರ್ಕಾರದವರು ಏನು ಪರಮಿಯನ್ನು ಸಭೆಗೆ ಕೊಡಬೇಕೋ ಅದನ್ನು ಕೊಡಬೇಕಾಗುತ್ತದೆ. ಮುಖ್ಯವಾಗಿ ನಾನು ಕಳಿಸಿದಂಥ ವಿಷಯಗಳಿಗೆ ಯಾವಾಗ ಅವಕಾಶ ಸಿಗುತ್ತದೆ ಎಂಬುದನ್ನು ತಾವು ತಿಳಿಸಬೇಕು.

ಅಧ್ಯಕ್ಷರು.—ನಾಳೆ ದಸರಾ ವಿಷಯದ ಬಗ್ಗೆ ತೆಗೆದುಕೊಳ್ಳಲಾಗುತ್ತದೆ.

ಶ್ರೀ ಎಚ್. ಡಿ. ದೇವೇಗೌಡ.—ಕಳೆದ ಸಾರಿ ಈ ಸಭೆಯನ್ನು ಮುಂದೂಡುವುದಕ್ಕೆ ಒಂದೆರಡು ಗಂಟೆಗಳ ಸಮಯ ಇದೆ ಎಂದು ಇರುವಾಗ ಈ ಸಚಿವ ಸಂಪುಟದ ಒಬ್ಬರು ಸಚಿವರು ಈ ಸಭೆಯಲ್ಲಿ ಮಾತನಾಡುತ್ತಾ ನಾನು ನನ್ನ ಶಕ್ತಿಯ ಮೇಲೆ ಮಂತ್ರಿಯಾಗಿದ್ದೇನೆಂದು ಹೇಳಿದ್ದರು. ಇಲ್ಲಿ ಸಭಾನಾಯಕರು ಇದ್ದಾರೆ. ಅದೇ ದಿನ ಈ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ತಾವು ಸಭೆಯಲ್ಲಿ ಇರಲಿಲ್ಲ. ನನ್ನ ಶಕ್ತಿಯ ಮೇಲೆ ಮಂತ್ರಿಯಾಗಿದ್ದೇನೆಂದು ಅವರು ಹೇಳಬೇಕಾದರೆ ಮುಖ್ಯ ಮಂತ್ರಿಗಳ ಅಧಿಕಾರ ಎಷ್ಟರಮಟ್ಟಿಗೆ ಇದೆ ಎಂಬ ಪ್ರಶ್ನೆ ಉದ್ಭವವಾಗುತ್ತದೆ. ಮುಖ ಮಂತ್ರಿಗಳಿಗೆ ಮಂತ್ರಿಗಳನ್ನು ನೇಮಕ ಮಾಡಿಕೊಳ್ಳುವ ಅಧಿಕಾರವಿರುತ್ತದೆ. ಅಂದಮೇಲೆ ಅವರು ಆ ರೀತಿ ಹೇಳಿದ್ದು ಸರಿಯೇ ಎಂಬ ಬಗ್ಗೆ ಮುಖ್ಯಮಂತ್ರಿಗಳು ಉತ್ತರ ಕೊಡಬೇಕು. ರೂಲ್ 312 ರ ಪ್ರಕಾರ ಇದರ ಬಗ್ಗೆ ನಾನು ಒಂದು ನೋಟೀಸನ್ನು ಸಹ ತಮಗೆ ಕಳಿಸಿಕೊಟ್ಟಿದ್ದೇನೆ.

ಅಧ್ಯಕ್ಷರು.—ಎಲ್ಲವೂ ಒಂದೊಂದಾಗಿ ಬರುತ್ತವೆ.

ಶ್ರೀ ಎಚ್. ಡಿ. ದೇವೇಗೌಡ.—ಈಗ ಮುಖ್ಯಮಂತ್ರಿಗಳು ಸಭೆಯಲ್ಲಿರುವುದರಿಂದ ಆ ಬಗ್ಗೆ ಹೇಳಿಕೆ ಕೊಡಬಹುದು.

ಶ್ರೀ ಡಿ. ದೇವರಾಜ ಅರಸ್.—ಮಾನ್ಯ ಅಧ್ಯಕ್ಷರು ಯಾವಾಗ ತೆಗೆದುಕೊಳ್ಳಬೇಕೆಂದು ಅಪ್ಪಣೆ ಕೊಡುತ್ತಾರೋ ಆಗ ನಾನು ತೆಗೆದುಕೊಳ್ಳುವುದಕ್ಕೆ ತಯಾರಿದ್ದೇನೆ.

ಅಧ್ಯಕ್ಷರು.—ಈಗ ಮುಂದಿನ ವಿಷಯಕ್ಕೆ ಹೋಗೋಣ.

MYSORE LAND REFORMS (AMENDMENT) BILL, 1972

Motion to Consider

(Debate Contd.)

ಶ್ರೀ ಎಚ್. ಡಿ. ದೇವೇಗೌಡ.—ಭೂಸುಧಾರಣಾ ವಿಧೇಯಕವನ್ನು ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ಮೊದಲು ಆ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಿಂದ ಒಂದು ಕ್ಲಾರಿಫಿಕೇಷನ್ ನಮಗೆ ಬೇಕು. ಈ ಮೊದಲು ಈ ವಿಧೇಯಕವನ್ನು ಈ ಸಭೆಯ ಮುಂದೆ ಇಟ್ಟಾಗ, ಈ ಮಸೂದೆಯನ್ನು ಪಾಯಿಂಟ್ ಸೆಲೆಕ್ಟ್ ಕಮಿಟಿಗೆ ಕಳುಹಿಸುವ ವಿಚಾರವಿತ್ತು. ಆ ಕಮಿಟಿಯವರು ಈ ಮಸೂದೆಯನ್ನು ಕೂಲಂಕಷವಾಗಿ ಪರಿಶೀಲನೆ ಮಾಡಿದ ನಂತರ ಪುನಃ ಈ ಸಭೆಯಲ್ಲಿ ಚರ್ಚೆಗೆ ತೆಗೆದುಕೊಳ್ಳುವ ಸಂಭವವಿದೆಯೇ ಅಥವಾ ಈ ಸಭೆಯಲ್ಲಿಯೇ ಚರ್ಚೆ ಮಾಡಿ ತೀರ್ಮಾನ ತೆಗೆದುಕೊಳ್ಳು